ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 158/2023**

**ಫ್ರಾಸಾ- 2 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸಾಗರ್ |
| ತಂದೆಯ ಹೆಸರುಃ | : | ಚಂದ್ರೇಗೌಡ |
| ವಯಸ್ಸುಃ | : | 30 ವರ್ಷ |
| ಉದ್ಯೋಗಃ | : | ಅಂಗಡಿ ವ್ಯಾಪಾರ |
| ವಾಸ | : | ಎಂ ಹೊಸೂರು ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಈಗ ತೋರಿಸಿದ ನಿಪಿ-4ರಲ್ಲಿರುವ ರುಜು ನನ್ನದೆ. ಸಾಕ್ಷಿಯ ರುಜುವನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. 29-10-22 ರಂದು ಈ ಸಹಿಯನ್ನು ಹಿರಿಸಾವೆ ಬ್ರಿಡ್ಜ್ ಬಳಿ ಹಾಕಿರುತ್ತೇನೆ. ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಕಿರುತ್ತೇನೆ. ನಾನು ಹಿರಿಸಾವೆ ಬಸ್ ನಿಲ್ದಾಣದಲ್ಲಿದ್ದಾಗ ಪೊಲೀಸರು ನನ್ನನ್ನು ಮತ್ತು ಚಾಸಾ3 ರವರನ್ನು ಹಿರಿಸಾವೆ ಬ್ರಿಡ್ಜ್ ಬಳಿ ಕರೆದುಕೊಂಡು ಹೋದರು. ಆಗ ಸಮಯ ಬೆಳಿಗ್ಗೆ ಸುಮಾರು 8ಕಾಲು ಗಂಟೆ ಆಗಿತ್ತು. ಅಲ್ಲಿ ಮಾರುತಿ ಸುಜುಕಿ ಬೈಕಿನಲ್ಲಿ ಅಮೀರ್ ಹುಸೇನ್ ಎಂಬ ವ್ಯಕ್ತಿ ಶ್ರವಣಬೆಳಗೊಳದ ಕಡೆಯಿಂದ ಹಿರಿಸಾವೆ ಕಡೆ ಬರುತ್ತಿದ್ದನು. ಪೊಲೀಸರು ಆತನನ್ನು ತಡೆದು ನಿಲ್ಲಿಸಿದರು. ಆತನ ಬಳಿ ಬಿಳಿ ಬಣ್ಣದ ಚೀಲ ಇತ್ತು. ಅದನ್ನು ಪೊಲೀಸರು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇರುವುದು ಎಂದು ಪೊಲೀಸರು ತಿಳಿಸಿದರು. ಅದನ್ನು ಸ್ಥ,ಳದಲ್ಲಿ ಪೊಲೀಸರು ತೂಕ ಮಾಡಿದರು. ಅದು 1ಕೆಜಿ 670ಗ್ರಾಂ ಇದೆ ಎಂದು ತಿಳಿಸಿದರು. ಆ ವ್ಯಕ್ತಿ ಹೆಸರು ಅಮೀರ್ ಹುಸೇನ್ ಎಂದು ಗೊತ್ತಾಯಿತು. ಆ ವ್ಯಕ್ತಿ ಈ ದಿವಸ ನ್ಯಾಯಾಲಯದ ಮುಂದೆ ಇದ್ದಾನೆ. ಅದನ್ನು ಪಡೆದುಕೊಂಡು ಪೊಲೀಸರು ನಮ್ಮ ಸಹಿ

ಪಡೆದುಕೊಂಡರು. ನಿಪಿ-2 ರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ದಿವಸ ವಶಪಡಿಸಿಕೊಂಡ ಗಾಂಜಾವನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದಿರುವ ಎಂ.ಒ.1 ಆಗಿರುತ್ತದೆ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ-3 ಸಹ ಇದ್ದರು. ಈಗ ತೋರಿಸಿದ ನಿಪಿ-8 ರಿಂದ 10ರ ಫೋಟೋಗಳಲ್ಲಿ ನಾನು ಇದ್ದೇನೆ. ಅವುಗಳನ್ನು ಸ್ಥಳದಲ್ಲಿ ತೆಗೆದಿರುತ್ತಾರೆ. ಆರೋಪಿ ಬಂದ ಬೈಕನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಬೈಕನ್ನು ಹಾಜರುಪಡಿಸದೇಇ ರುವುದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**